ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

**ಸಂಖ್ಯೆ : ವಾಇ : ಜಂ ನಿ : ಸುಮಪ : 2021–22** **ದಿನಾಂಕ : 22–10–2021**

# ಮಾಧ್ಯಮ ಆಹ್ವಾನ

**MEDIA INVITATION**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವತಿಯಿಂದ – ಕಿತ್ತೂರು ರಾಣಿ ಚೆನ್ನಮ್ಮ ಜಯಂತೋತ್ಸವ**

**ಕಾರ್ಯಕ್ರಮದ ಉದ್ಘಾಟನೆ :**

ಬಸವರಾಜ ಎಸ್ ಬೊಮ್ಮಾಯಿ,
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ವಿಶೇಷ ಆಹ್ವಾನಿತರು :**
ಶ್ರೀಮತಿ ನಿರ್ಮಾಲಾ ಸೀತಾರಾಮನ್,
ಕೇಂದ್ರ ಹಣಕಾಸು ಸಚಿವರು, ಭಾರತ ಸರ್ಕಾರ

ರಾಜೀವ್ ಚಂದ್ರಶೇಖರ್,
ಕೇಂದ್ರ ಉದ್ಯಮಶೀಲತೆ, ಕೌಶಲ್ಯಾಭಿವೃದ್ಧಿ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು, ಭಾರತ ಸರ್ಕಾರ

**ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಘನ ಉಪಸ್ಥಿತಿ**

ವಿ. ಸುನೀಲ್‌ಕುಮಾರ್,
ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು.

**ಅಧ್ಯಕ್ಷತೆ :**
**ಉದಯ್ ಬಿ ಗರುಡಚಾರ್,**
**ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ.**

**ದಿನಾಂಕ: 23–10–2021, ಶನಿವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ**
**ಸ್ಥಳ : ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಬೆಂಗಳೂರು – 560 002**

# ಪತ್ರಿಕಾ ಪ್ರಕಟಣೆ

**PRESS RELEASE**

**ಮಾಜಿ ಯೋಧರ ಆರೋಗ್ಯ ಯೋಜನೆಗೆ 3321 ಕೋಟಿ ಹಣ ಬಿಡುಗಡೆ: ಕೇಂದ್ರ ಸಚಿವ ರಾಜನಾಥ್ ಸಿಂಗ್**

ಬೆಂಗಳೂರು, ಅಕ್ಟೋಬರ್ 22, (ಕರ್ನಾಟಕ ವಾರ್ತೆ):

ಮಿಲಿಟರಿಯಲ್ಲಿ ಸೇವೆ ಸಲ್ಲಿಸಿರುವ ಮಾಜಿ ಯೋಧರ ಆರೋಗ್ಯ ಯೋಜನೆಯಡಿ 2020–21ನೇ ಸಾಲಿನಲ್ಲಿ 3321 ಕೋಟಿ ರೂಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ ಎಂದು ಕೇಂದ್ರ ರಕ್ಷಣಾ ಸಚಿವರಾದ ರಾಜನಾಥ್ ಸಿಂಗ್ ತಿಳಿಸಿದರು.

ಅವರು ಇಂದು ಹೋಟೆಲ್ ತಾಜ್ ವೆಸ್ಟೆಂಡ್‌ನಲ್ಲಿ ಹೋಟೆಲ್‌ನಲ್ಲಿ ರಕ್ಷಣಾ ಇಲಾಖೆಯ ಮಾಜಿ ಸೈನಿಕರು ಹಾಗೂ ರಕ್ಷಣಾ ಇಲಾಖೆಯ ಉನ್ನತ ಅಧಿಕಾರಿಗಳ ಜೊತೆ ಸಭೆ ನಡೆಸಿ ಮಾತನಾಡುತ್ತಾ, ಮಾಜಿ ಯೋಧರು ಹಾಗೂ ಅವರ ಅವಲಂಭಿತರಿಗೆ ಮೀಸಲಿಡಲಾದ ಆರೋಗ್ಯ ಯೋಜನೆಯು ಸದ್ಯ ದೇಶದ 353 ಜಿಲ್ಲೆಗಳಲ್ಲಿ ಚಾಲ್ತಿಯಲ್ಲಿದೆ. ಇದಕ್ಕೆ 3050 ಆಸ್ಪತ್ರೆಗಳು ಸೇರಿದಂತೆ 421 ಪಾಲಿಕ್ಲಿನಿಕ್‌ಗಳು ಸಹ ಸೇರಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ಚಿಕಿತ್ಸಾ ವೆಚ್ಚದ ಶೇ 54ರಷ್ಟು ಹಣವನ್ನು ನೀಡಲಿದ್ದು, ಉಳಿದ ಶೇ 46ರಷ್ಟು ಹಣವನ್ನು ಯೋಧರೇ ಭರಿಸಬೇಕಾಗುತ್ತದೆ ಎಂದರು

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮಾಡನಾಡಿ, ಸರ್ಕಾರವು ಮಾಜಿ ಯೋಧರ ಚಿಕಿತ್ಸೆಗೆ ಇನ್ನೂ ಹೆಚ್ಚಿನ ಅನದಾನ ಒದಗಿಸಬೇಕು. ಇಎಸ್‌ಐ ಆಸ್ಪತ್ರೆ ಸೇರಿದಂತೆ ಇತರ ಖಾಸಗಿ ಆಸ್ಪತ್ರೆಗಳಲ್ಲೂ ಇವರಿಗೆ ಆರೋಗ್ಯ ಯೋಜನೆ ವಿಸ್ತರಿಸಬೇಕು. ಫಲಾನುಭವಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ಹಾಗೂ ಪಾವತಿ ನೀಡಬೇಕೆಂದರು

ಸಭೆಯಲ್ಲಿ ರಕ್ಷಣಾ ಕಾರ್ಯದರ್ಶಿ ಅಜಯ್ ಕುಮಾರ್, ಮಿಲಿಟರಿ ವ್ಯವಹಾರಗಳ ಕಾರ್ಯದರ್ಶಿ ಜನರಲ್ ಬಿಪಿನ್ ರಾವತ್, ಇಎಸ್‌ಡಬ್ಲ್ಯೂ ಕಾರ್ಯದರ್ಶಿ ಬಿ. ಆನಂದ್ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಛಾಯಾಚಿತ್ರ ಶೀರ್ಷಿಕೆ :**

1. ಗೌರವಾನ್ವಿತ ಕೇಂದ್ರ ರಕ್ಷಣಾ ಮಂತ್ರಿಗಳಾದ ರಾಜನಾಥ್ ಸಿಂಗ್ ಅವರು ಎರಡು ದಿನಗಳ ಬೆಂಗಳೂರು ಭೇಟಿಗಾಗಿ ಆಗಮಿಸಿದ್ದು, ಇಂದು ಬೆಂಗಳೂರಿನ ಸಿ.ವಿ. ರಾಮನ್ ನಗರದಲ್ಲಿರುವ Aeronautical Development Establishment ಗೆ ಭೇಟಿ ನೀಡಿ DRDO ಅಭಿವೃದ್ಧಿ ಪಡಿಸಿರುವ ನೂತನ ತಂತ್ರಜ್ಞಾನ ಬಳಸಿಕೊಂಡು ತಯಾರಿಸಲಾಗಿರುವ ಉಪಕರಣಗಳ ವಸ್ತುಪ್ರದರ್ಶನವನ್ನು ವೀಕ್ಷಣೆ ಮಾಡಿದರು. ಈ ಸಮಯದಲ್ಲಿ ಡಿ. ಆರ್.ಡಿ.ಓ ಹಿರಿಯ ಅಧಿಕಾರಿಗಳು, ರಕ್ಷಣಾ ಕ್ಷೇತ್ರದ ಅಧಿಕಾರಿಗಳು ಹಾಗೂ ಎ.ಡಿ.ಇ ಅಧಿಕಾರಿಗಳು ಉಪಸ್ಥಿತರಿದ್ದರು

2. ಬ್ಲಾಕ್ ಕ್ಯಾಟ್ ಕಮಾಂಡೋಗಳ ಕಾರ್ ರಾಲಿ ! ನಗರದ ರಾಷ್ಟ್ರೀಯ ಮಿಲಿಟರಿ ಸ್ಮಾರಕ, ಇಂದಿರಾ ಗಾಂಧಿ ಸಂಗೀತ ಕಾರಂಜಿ ಸಮೀಪ, ಜವಹರಲಾಲ್ ನೆಹರೂ ತಾರಾಲಯದ ಎದುರು, ಇಲ್ಲಿ ಸುದರ್ಶನ ಭಾರತ್ ಪರಿಕ್ರಮ, ಬ್ಲಾಕ್ ಕ್ಯಾಟ್ ಕಾರ್ ರಾಲಿಗೆ ಕಂದಾಯ ಸಚಿವ ಆರ್. ಅಶೋಕ್ ಅವರು ಚಾಲನೆ ನೀಡಿದರು. ನ್ಯಾಷನಲ್ ಸೆಕ್ಯೂರಿಟಿ ಗಾರ್ಡ್ಸ್ ಮಹಾ ನಿರ್ದೇಶಕ ಶ್ರೀ ಎಂ. ಎ. ಗಣಪತಿ, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು

**ಉರ್ದು ಶಿಕ್ಷಕರ ಅಂತಿಮ ಆಯ್ಕೆ ಪಟ್ಟಿ ಪ್ರಕಟ**

ಬೆಂಗಳೂರು, ಅಕ್ಟೋಬರ್ 19 (ಕರ್ನಾಟಕ ವಾರ್ತೆ):

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 19–11–2018ರಂದು ಅಧಿಸೂಚಿಸಲಾದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿನ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿನ ಉರ್ದು ಭಾಷಾ ಶಿಕ್ಷಕರು (RPC 79) ಹುದ್ದೆಗಳ ಅಂತಿಮ

ಆಯ್ಕೆಪಟ್ಟಿಯನ್ನು ಆಯೋಗದ ಅಂತರ್ಜಾಲ http://kpsc.kar.nic.in/Final list ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪ್ರಾಣಿಗಳ ದತ್ತು ಸ್ವೀಕಾರ

ಬೆಂಗಳೂರು, ಅಕ್ಟೋಬರ್ 19 (ಕರ್ನಾಟಕ ವಾರ್ತೆ):

ಮೈಸೂರು ಮೃಗಾಲಯದ ಶ್ರೀ ಚಾಮರಾಜೇಂದ್ರ ಮೃಗಾಲಯದ_"ಪ್ರಾಣಿಗಳ ದತ್ತು ಸ್ವೀಕಾರ ಯೋಜನೆ" ಅಡಿಯಲ್ಲಿ, ಮೈಸೂರು ಮೃಗಾಲಯದ ಪ್ರಾಣಿ ಪಕ್ಷಿಗಳಾದ, ಮಲಬಾರ್ ದೈತ್ಯ ಅಳಿನ್ನು ಬೆಂಗಳೂರಿನ ವೆಂಕಟೇಶ್ ಪಿ.ಎಸ್., ಹುಲ್ಲಕ್ ಗಿಬ್ಬನ್‌ನ್ನು ಬೆಂಗಳೂರಿನ ನಟಿಯಾದ ಅನುಸೂಯ ಕೋಮಲ್ ಕುಮಾರ್, ಲವ್ ಬರ್ಡ್‌ನ್ನು ಮಂಡ್ಯದ ಕೆ.ಟಿ. ಪದ್ಮ ರಾಮಶೆಟ್ಟಿ, ಬ್ರೌನ್ ಕಪ್ಪುಚಿನ್ ಕೋತಿಯನ್ನು ಮೈಸೂರಿನ ಲಿಲಾ ಮೂರ್ತಿ ಹಾಗೂ ಮೈಸೂರು, ಬೆಂಗಳೂರು ಹಾಗೂ ಇತರೆ ಜಿಲ್ಲೆಗಳ ದಾನಿಗಳು ಒಟ್ಟು 25 ಪ್ರಾಣಿ ಪಕ್ಷಿಗಳನ್ನು ಮಂದಿ ಸೇರಿ "ZAK App" ಮೂಲಕ ದತ್ತು ಸ್ವೀಕಾರ ಮಾಡಿರುವುದಕ್ಕೆ ಮೈಸೂರು ಮೃಗಾಲಯವು ಹರ್ಷಿಸುತ್ತದೆ. ಈ ಮಹತ್ವದ ಕೊಡುಗೆಯ ಮೂಲಕ ವನ್ಯಪ್ರಾಣಿ ಸಂರಕ್ಷಣೆಯ ಸತ್ಕಾರ್ಯದಲ್ಲಿ ಭಾಗವಹಿಸಿರುವುದಕ್ಕಾಗಿ ಅವರುಗಳನ್ನು ಮೈಸೂರು ಮೃಗಾಲಯವು ಅಭಿನಂದಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಮೂಲಸೌಲಭ್ಯ ಅಭಿವೃದ್ಧಿ ಹಾಗೂ ವಸತಿ ಸಚಿವರ ಪ್ರವಾಸ

**ಬೆಂಗಳೂರು, ಅಕ್ಟೋಬರ್ 22, 2021(ಕರ್ನಾಟಕ ವಾರ್ತೆ):**

**ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ವಿ. ಸೋಮಣ್ಣ ಅವರು ಅಕ್ಟೋಬರ್ 23 ರಂದು ವಿಜಯಪುರ ಹಾಗೂ ರಾಜ್ಯದ ಹೊರ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳಲಿರುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು

**ದಿನಾಂಕ: 22.10.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 90 | ತೃಪ್ತಿಕರ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 79 | ತೃಪ್ತಿಕರ | $PM_{10}$ |
| 3 | ಕವಿಕ, ಮೈಸೂರು ರಸ್ತೆ | 107 | ಸಾಧಾರಣ | $PM_{2.5}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 81 | ತೃಪ್ತಿಕರ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 78 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 84 | ತೃಪ್ತಿಕರ | CO |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 68 | ತೃಪ್ತಿಕರ | CO |
| **(22.10.2021 at 10.05 AM)** | | | | |
| 8 | BWSSB,ಕಾಡಬೀಸನಹಳ್ಳಿ | 95 | ತೃಪ್ತಿಕರ | $PM_{10}$ |
| 9 | ಪೀಣ್ಯ | 77 | ತೃಪ್ತಿಕರ | $PM_{2.5}$ |
| 10 | ಬಿಟಿಎಂ ಲೇಔಟ್ | * | * | * |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕ ಒಡ್ಡುವಿಕೆಯಿಂದ ಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿ ಕಒಡ್ಡುವಿಕೆಯಿಂದ ಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 22.10.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 90 | Satisfactory | $PM_{10}$ |
| 2 | Jayanagar 5th Block, Shalini ground | 79 | Satisfactory | $PM_{10}$ |
| 3 | KAVIKA, Mysore Road | 107 | Moderate | $PM_{2.5}$ |
| 4 | Rajeev Gandhi Institute of Chest Disease, NIMHANS, Hombegowda Nagar | 81 | Satisfactory | $PM_{10}$ |
| 5 | HSR Layout, near Central Silkboard | 78 | Satisfactory | $PM_{10}$ |
| 6 | City Railway Station, Magestic, Bengaluru | 84 | Satisfactory | CO |
| 7 | Saneguruvanahalli, NisargaBhavan, KSPCB, Shivanagara | 68 | Satisfactory | CO |
| **(22.10.2021 at 10.05 AM)** | | | | |
| 8 | BWSSB, Kadabesanahalli | 95 | Satisfactory | $PM_{10}$ |
| 9 | Peenya | 77 | Satisfactory | $PM_{2.5}$ |
| 10 | BTM Layout | * | * | * |

ಬೆಂಗಳೂರು, ಅಕ್ಟೋಬರ್ 19 (ಕರ್ನಾಟಕ ವಾರ್ತೆ):